ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU
CITY UNIVERSITY

Office of the Registrar (Evaluation), Central College Campus, Dr. B.R. Ambedkar Veedhi, Bengaluru – 560 001. E-mail: registrarevlubcu@gmail.com, Ph.No.080-22295559

ಸಂ.ಬೆ.ನ,ವಿ/ಪರೀಕ್ಷಾ/ಘಟಿಕೋತ್ಸವ/2021-22 / 1899 ದಿನಾಂಕ: 01.02.2022

## ಅಧಿಸೂಚನೆ

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ 2019-20 ನೇ ಸಾಲಿನಲ್ಲಿ ಸ್ನಾತಕೋತ್ತರ ವ್ಯಾಸಂಗದ ಅಂತಿಮ ಸೆಮಿಸ್ಟರ್ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಥಮ ಘಟಿಕೋತ್ಸವದಲ್ಲಿ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿ ಸಲ್ಲಿಸಲು ಅವಕಾಶ ನೀಡುವ ಕುರಿತು

ಉಲ್ಲೇಖ
1. ವಿಶ್ವವಿದ್ಯಾನಿಲಯದ ಅಧಿಸೂಚನೆ No.BCU/Annual Con/2020-21 dated: 24.03.2021
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 28.01.2022.

****

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಯೋಜಿತ ಮಹಾವಿದ್ಯಾಲಯಗಳಲ್ಲಿ 2018-19 ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ (ಪಿ.ಜಿ) ವ್ಯಾಸಂಗದ ಪ್ರವೇಶ ಪಡೆದು 2019-20ನೇ ಸಾಲಿನಲ್ಲಿ ಅಂತಿಮ ಸೆಮಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡುವ ಕುರಿತಂತೆ ಉಲ್ಲೇಖ (1) ರ ಅಧಿಸೂಚನೆಯಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿತ್ತು. ಕೋವಿಡ್-19 ರ ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಇನ್ನೂ ಹಲವಾರು ವಿದ್ಯಾರ್ಥಿಗಳು ಅರ್ಜಿಗಳನ್ನು ಸಲ್ಲಿಸದೇ ಇರುವುದು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅರ್ಜಿ ಸಲ್ಲಿಸದ ವಿದ್ಯಾರ್ಥಿಗಳಿಗಾಗಿ, **ದಿನಾಂಕ. 15.02.2022** ವರೆಗೆ ಆನ್‌ಲೈನ್‌ನಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಿರುವ ಅಗತ್ಯವಿಲ್ಲ. ಈ ಹಿಂದೆ ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ಮಾತ್ರ ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

| | |
|---|---|
| **ಅ) ನಿಗದಿತ ಶುಲ್ಕ (ಎಲ್ಲ ಕೋರ್ಸು/ ಪ್ರವರ್ಗಗಳಿಗೆ) ಆನ್‌ಲೈನ್ ಪಾವತಿ** | **Rs. 1,180/- ಭಾರತೀಯ ನಾಗರೀಕರಿಗೆ**<br>**Rs. 4,515/- ವಿದೇಶಿ ನಾಗರೀಕರಿಗೆ** |

**ಆ) ಅಭ್ಯರ್ಥಿಗಳು ನಿಗದಿತ ಶುಲ್ಕ ಸಂದಾಯ ಮಾಡಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.02.2022**

2019-20 ರಲ್ಲಿ ಸ್ನಾತಕೋತ್ತರ ವ್ಯಾಸಂಗಕ್ಕೆ ಪ್ರವೇಶ ಪಡೆದು 2020-21 ರಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು, 2018-19 ರಲ್ಲಿ ಪ್ರವೇಶ ಪಡೆದು 2020-21ರಲ್ಲಿ ಪದವಿಯನ್ನು ಯಶಸ್ವಿಯಾಗಿ ಪೂರೈಸಿರುವ ಸ್ನಾತಕ ವಿದ್ಯಾರ್ಥಿಗಳು ಘಟಿಕೋತ್ಸವ ಪ್ರಮಾಣ ಪತ್ರದ ಶುಲ್ಕವನ್ನು ಅಂತಿಮ ಸೆಮಿಸ್ಟರ್ ಪರೀಕ್ಷಾ ಶುಲ್ಕದೊಂದಿಗೆ ಪಾವತಿಸಿರುವುದರಿಂದ, ಅವರು ಪ್ರತ್ಯೇಕವಾದ ಅರ್ಜಿಗಳನ್ನು ಸಲ್ಲಿಸುವ ಅಗತ್ಯವಿರುವುದಿಲ್ಲ.

ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಹರಾದ ಎಲ್ಲ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವದು.

ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಾಂಶುಪಾಲರು ತಮ್ಮ ಮಹಾವಿದ್ಯಾಲಯದಿಂದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಪಟ್ಟಿ ಮಾಡಿ ಅಂತಹ ವಿದ್ಯಾರ್ಥಿಗಳ ಅರ್ಜಿಗಳನ್ನು ಅಗತ್ಯ ದೃಢೀಕೃತ ದಾಖಲೆಗಳು, 2 ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು ಮತ್ತು ನಿಗದಿತ ಶುಲ್ಕದೊಂದಿಗೆ ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿಗೆ **ದಿನಾಂಕ. 23.02.2022** ರೊಳಗೆ ಸಲ್ಲಿಸತಕ್ಕದು.

ಸ್ವಾಯತ್ತ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಪಾವತಿಸಬೇಕಾದ ನಿಗದಿತ ಶುಲ್ಕ:

**ಅ) ಭಾರತೀಯ ನಾಗರೀಕರಿಗೆ Rs. 2,350/-**

**ಆ) ವಿದೇಶಿ ನಾಗರೀಕರಿಗೆ Rs. 8,790/-**

ಅಭ್ಯರ್ಥಿಗಳು ನಿಗದಿತ ಶುಲ್ಕ ಸಂದಾಯ ಮಾಡಿ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ 15.02.2022**

ಸೂಚನೆಗಳು:

1. ಅಭ್ಯರ್ಥಿಗಳ ತಮ್ಮ ಹೆಸರು, ನೊಂದಣಿ ಸಂಖ್ಯೆ, ವಿಳಾಸ, ಇ-ಮೇಲ್, ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ದಾಖಲಿಸತಕ್ಕದ್ದು.
2. ಈಗಾಗಲೇ ನೀಡಿರುವ ಅಂಕಪಟ್ಟಿಗಳಲ್ಲಿ ಏನಾದರೂ ತಿದ್ದುಪಡಿಗಳು ಇದ್ದಲ್ಲಿ ಅವುಗಳನ್ನು ಅರ್ಜಿಸಲ್ಲಿಸಲು ಪೂರ್ವದಲ್ಲಿ ಸರಿಪಡಿಸಿಕೊಂಡು ಅಂಕಪಟ್ಟಿಗಳ ಪ್ರತಿಗಳನ್ನು ಲಗತ್ತಿಸತಕ್ಕದು.
3. ಒಂದು ಸಲ ಪಾವತಿಸಿದ ಘಟಿಕೋತ್ಸವ ಶುಲ್ಕವನ್ನು ಯಾವುದೇ ಕಾರಣಕ್ಕೆ ಹಿಂತಿರುಗಿಸುವುದಿಲ್ಲ ಅಥವಾ ಮುಂದಿನ ಘಟಿಕೋತ್ಸವಕ್ಕೆ ಸರಿಹೊಂದಿಸುವದಿಲ್ಲ.
4. ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ಆಯಾಯ ಕಲಾ, ವಾಣಿಜ್ಯ, ವಿಜ್ಞಾನ, ಶಿಕ್ಷಣ ನಿಕಾಯದ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಸ್ನಾತಕ ಮತ್ತು ಸ್ನಾತಕೋತ್ತರ ಅಭ್ಯರ್ಥಿಗಳು, ಮಾತ್ರ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.
5. ಪ್ರತಿ ಸೆಮೆಸ್ಟರ್ ದೃಢೀಕೃತ ಅಂಕಪಟ್ಟಿಯ ಪ್ರತಿ, ಶುಲ್ಕ ಪಾವತಿಸಿ- ರಶೀದಿ/ಚಲನ್ ಪ್ರತಿ ಹಾಗೂ 2 ಪಾಸ್ ಪೋಟೋ ಅಳತೆಯ ಭಾವಚಿತ್ರಗಳೊಂದಿಗೆ ಆನ್‌ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ಆಯಾಯ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರಿಗೆ ಅಥವಾ ಆಯಾಯ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ನಿಗದಿತ ಕೊನೆಯ ದಿನಾಂಕದಿಂದ ಮೂರು ದಿವಸ ಒಳಗೆ ಸಲ್ಲಿಸತಕ್ಕದು.

| |
|---|
| ಯಾವುದೇ ಕಾರಣಕ್ಕೂ ಮುದ್ರಿತ ಅರ್ಜಿಗಳ ಪ್ರತಿಗಳನ್ನು ವಿಶ್ವವಿದ್ಯಾನಿಲಯದಲ್ಲಿ ಸ್ವೀಕರಿಸುವುದಿಲ್ಲ. |

6. ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಂಶುಪಾಲರು ಸ್ವೀಕರಿಸಲಾದ ಅರ್ಜಿಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಿ, ದೃಢೀಕರಿಸಿದ ಅರ್ಜಿ ಪ್ರತಿ ಹಾಗೂ ಪ್ರತಿ ಸೆಮೆಸ್ಟರ್ ಅಂಕ ಪಟ್ಟಿಯ ದೃಢೀಕೃತ ಪ್ರತಿ, ಶುಲ್ಕ ಪಾವತಿಸಿದ ರಶೀದಿ/ ಚಲನ್ ಪ್ರತಿ, 2 ಪಾಸ್ ಫೋಟೋ ಅಳತೆಯ ಭಾವಚಿತ್ರಗಳೊಂದಿಗೆ **ಎಲ್ಲ ಅಭ್ಯರ್ಥಿಗಳ** ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ **ದಿನಾಂಕ. 23.02.2022** ರೊಳಗೆ ಸಲ್ಲಿಸತಕ್ಕದ್ದು.
7. ತಾತ್ಪೂರ್ತಿಕವಾಗಿ ಪ್ರಕಟಿಸಿದ ಅಂಕಗಳ ಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.

ಆದೇಶ ಮೇರೆಗೆ,

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು – 560 001

ಗೆ,

1. ಎಲ್ಲಾ ಮುಖ್ಯಸ್ಥರುಗಳು, ಸ್ನಾತಕೋತ್ತರ ವಿಭಾಗಗಳು, ಬೆ.ನ.ವಿ.
2. ಎಲ್ಲಾ ಪ್ರಾಂಶುಪಾಲರು ಸಂಯೋಜಿತ/ಸ್ವಾಯತ್ತ ಮಹಾವಿದ್ಯಾಲಯಗಳು, ಬೆ.ನ.ವಿ.

ಪ್ರತಿ

1. ಕುಲಪತಿಗಳ, ಕುಲಸಚಿವರ, ಕುಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳು, ಬೆ.ನ.ವಿ
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಸಚಿವರ(ಮೌಲ್ಯಮಾಪನ)
3. ಗಣಕಯಂತ್ರ ವಿಭಾಗ, ಬೆ.ನ.ವಿ
4. ಲಾಜಿಸಿಸ್ ಪ್ರತಿನಿಧಿ, ಬೆ.ನ.ವಿ
5. ಪ್ರಮುಖ ದಿನಪ್ರತಿಕೆಗಳ, ಸಂಪಾದಕರು